ಮುಜರೈ.

ಇಸ್ತಿಹಾರ್‌ನಾಮಾ.

ತಾರೀಖು 30ನೇ ಮೇ 1903.

ನಂ. 2425, ಇದರಡೀ ಕಂಡ ಜನಗಳು ಬಾಗೇಪಲ್ಲಿ ತಾಲ್ಲೂಕು ಯಲ್ಲಂಪಲ್ಲಿಯಲ್ಲಿ ಸರ್ಕಾರದ ಆಡಳಿತದಲ್ಲಿರುವ ಶ್ರೀ ವೆಂಕಟರಮಣಸ್ವಾಮಿಯ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಯೆ ಧರ್ಮ ದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ:-

ಮು॥ ರಾ॥ ರಾ॥ ಶಾನಭೋಗ ಸೀನಪ್ಪನವರು.
,, ಪಂಚಾಂಗ ವೆಂಕಟರಮಣಪ್ಪನವರು.
,, ವರ್ತಕರಾದ ದಾಸಸುಬ್ಬಯ್ಯನವರು.
,, ಯಲ್ಲಂಪಲ್ಲಿಯ ಪಟೇಲರಾದ ಏಪುರಿ ಅವುಲರಡ್ಡಿಯವರು.

ಹುಕುಂ ಬವೋಜೀಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರಿಟೆರಿ.

ಜಿಯೋಲಾಜಿಕಲ್.

ಇಸ್ತಿಹಾರ್‌ನಾಮಾ.

ತಾರೀಖು 2ನೇ ಜೂ೯ 1903.

ನಂ. 625—ಎಸ್, ಜಿಯೋಲಾಜಿಕಲ್ ಇಲಾಖೆಯ ಸಿಬ್ಬಂದಿಯಲ್ಲಿ ಇದರಡೀ ಕಂಡ ಪೊಕರರಾತಿಯು ಮತ್ತು ಬಡ್ತಿಯು ಹುಕುಂ ಮಾಡಲ್ಪಟ್ಟಿರುತ್ತದೆ:—

1. ಸಂಸ್ಥಾನದ ಆಫೀಷಿಯೇಟಿಂಗ್ ಮೂರನೇ ಭೂರಚನಾ ಶಾಸ್ತ್ರಜ್ಞರಾದ ಮೆ॥ ವಿ. ಎಸ್. ಸಾಂಬಶಿವ ಅಯ್ಯರ್, ಬಿ. ಎಸ್. ಸಿ., ಎಲ್. ಸಿ. ಇ., ಯವರು 1903ನೇ ಜುಲೈ ಗುರ್ತೆ ತಾರೀಖಿನಾರಭ್ಯ, ಮೆ॥ ಇ. ಡಬ್ಲ್ಯೂ. ವೆಬರೆಲ್ ಯವರಿಗೆ ಬದಲಾಗಿ, ಸೆಂಟ್ರೆಲ್ ಕಾಲೇಜಿನಲ್ಲಿ ಭೂರಚನಾ ಶಾಸ್ತ್ರದ ಉಪನ್ಯಾಸಕರಾಗಿಯು ಮತ್ತು ಜಿಯೋಲಾಜಿಕಲ್ ಮ್ಯೂಜಿಯಮಿನ ಕ್ಯೂರೇಟರಾಗಿಯು ಇರತಕ್ಕದ್ದು.

2. ಎರಡನೇ ಕ್ಲಾಸಿನ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಎಚ್. ಕೆ. ಸ್ಲೇಟರ್, ಎಫ್. ಜಿ. ಎಸ್., ಯವರು 1903ನೇ ಮಾರ್ಚಿ 10ನೇ ತಾರೀಖಿನಾರಭ್ಯ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾಗಿರತಕ್ಕದ್ದು.

ಹುಕುಂ ಬವೋಜೀಬ್,
ಡಬ್ಲ್ಯೂ. ಎಫ್. ಸ್ಕೀತ್,
ಜಿಯೋಲಾಜಿಕಲ್ ಇಲಾಖೆಯ ಗವರ್ನ್‌ಮೆಂಟ್ ಸೆಕ್ರಿಟೆರಿ.